www.Shikarat.com

ಈ ಪ್ರಶ್ನೆ ಪುಸ್ತಿಕೆಯಲ್ಲಿ ಸಾಮಾನ್ಯ ಕನ್ನಡ (ವಿಷಯ ಸಂಕೇತ : **173**) ಹಾಗೂ ಸಾಮಾನ್ಯ ಇಂಗ್ಲೀಷ್ (ವಿಷಯ ಸಂಕೇತ : **174**) ಪ್ರಶ್ನೆ ಪತ್ರಿಕೆಗಳಿವೆ. ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಇಂಗ್ಲೀಷ್ ಇವುಗಳಲ್ಲಿ ಯಾವುದಾದರೂ ಒಂದಕ್ಕೆ ಮಾತ್ರ ಉತ್ತರಿಸಬೇಕು. ಅಭ್ಯರ್ಥಿಗಳು ತಾವು ಆಯ್ಕೆ ಮಾಡಿ, ಉತ್ತರಿಸುವ ವಿಷಯದ ಹೆಸರು ಮತ್ತು ವಿಷಯ ಸಂಕೇತವನ್ನು ಕಡ್ಡಾಯವಾಗಿ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮೇಲೆ ನಿಗದಿತ ಸ್ಥಳದಲ್ಲಿ ನಮೂದಿಸತಕ್ಕದ್ದು.

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

**2017**

**ಪ್ರಶ್ನೆ ಪುಸ್ತಿಕೆ ಶ್ರೇಣಿ**

# ಪ್ರಶ್ನೆ ಪುಸ್ತಿಕೆ

# ಸಾಮಾನ್ಯ ಕನ್ನಡ

**C**

Sharat

**ಸಮಯ : $1\frac{1}{2}$ ಗಂಟೆಗಳು** | **ವಿಷಯ ಸಂಕೇತ : 173** | **ಗರಿಷ್ಠ ಅಂಕಗಳು : 100**

## ಸೂಚನೆಗಳು

1. ಪರೀಕ್ಷೆ ಪ್ರಾರಂಭಗೊಂಡ ತಕ್ಷಣವೇ ಒ.ಎಂ.ಆರ್. ಉತ್ತರಹಾಳೆಯಲ್ಲಿ ಪ್ರಶ್ನೆ ಪುಸ್ತಿಕೆ ಶ್ರೇಣಿಯನ್ನು ಗುರುತು ಮಾಡುವ ಮೊದಲು, ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಶ್ರೇಣಿಯ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪುಸ್ತಿಕೆಯ ಶ್ರೇಣಿ A, B, C ಅಥವಾ D ಅನ್ನು ವಿಷಯ ಸಂಕೇತ ಮತ್ತು ನೋಂದಣಿ ಸಂಖ್ಯೆಯನ್ನು OMR ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು. ಹಾಗೂ ನಿಗದಿತ ಸ್ಥಳದಲ್ಲಿ ತಾವು ಮತ್ತು ಸಂವೀಕ್ಷಕರು ಸಹಿ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಒ.ಎಂ.ಆರ್. ಹಾಳೆಯಲ್ಲಿ ತಿಳಿಸಿರುವ ಯಾವುದೇ ಮಾಹಿತಿಯನ್ನು ಭರ್ತಿ ಮಾಡುವುದು/ಎನ್ ಕೋಡ್ ಮಾಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಭರ್ತಿ ಮಾಡದಿದ್ದಲ್ಲಿ/ತಪ್ಪಿದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.**

www.shikarat.com

3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ **ಬೇರೆ ಏನನ್ನೂ ಬರೆಯಬಾರದು.**

**ನೋಂದಣಿ ಸಂಖ್ಯೆ**
4000 47 22

4. ಈ ಪ್ರಶ್ನೆ ಪುಸ್ತಿಕೆ **100** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.** ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.** ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆ ಹಾಳೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note :*** *English version of the instructions is printed on the back cover of this booklet.*

www.Shikarat.com

**ಸೂಚನೆ :** ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ತುಂಬಲು ನಾಲ್ಕು ಉತ್ತರ ನೀಡಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ. *(ಪ್ರಶ್ನೆ ಸಂಖ್ಯೆ 1 – 5)*

ಉದಾಹರಣೆ: ಮೀನ್ ಎಂದರೆ

(1) ಹೊಳೆಯುವ

(2) ಮೀಯು

(3) ಮೇಯು

(4) ಆಕಾಶ

ಇಲ್ಲಿ "ಹೊಳೆಯುವ" ಎಂಬುದು "ಮೀನ್"ನ ಅರ್ಥವನ್ನು ಹೇಳುವ ಪದ ಆದುದರಿಂದ (1) ನ್ನು ಗುರುತಿಸಬೇಕು.

1. "ಧರೆ ಹತ್ತಿ ಉರಿದಡೆ ನಿಲಲುಬಾರದು" ಯಾರ ವಚನ ?

(1) ಜೇಡರ ದಾಸಿಮಯ್ಯ

(2) ಅಕ್ಕಮಹಾದೇವಿ

(3) ಬಸವಣ್ಣ

(4) ಅಂಬಿಗರ ಚೌಡಯ್ಯ

2. ಕನ್ನಡ ಸಾಹಿತ್ಯದಲ್ಲಿ 'ಶೃಂಗಾರ ಕವಿ' ಎಂದು ಯಾರನ್ನು ಕರೆಯುತ್ತಾರೆ?

(1) ಕುಮಾರವ್ಯಾಸ

(2) ಮುದ್ದಣ

(3) ರತ್ನಾಕರವರ್ಣಿ

(4) ಲಕ್ಷ್ಮೀಶ

3. ನಿತ್ಯೋತ್ಸವದ ಕವಿ ಎಂದು ಪ್ರಸಿದ್ಧರಾದವರು ಯಾರು ?

(1) ಕುವೆಂಪು

(2) ಮಾಸ್ತಿ

(3) ಬೇಂದ್ರೆ

(4) ನಿಸಾರ್ ಅಹಮದ್

4. ಗದುಗಿನ ನಾರಣಪ್ಪನ ಕಾವ್ಯನಾಮ.

(1) ಅಭಿನವ ಪಂಪ

(2) ವಿಶ್ವೇಶ್ವರಾ

(3) ಕುಮಾರವ್ಯಾಸ

(4) ಚೆನ್ನಸೋಮೇಶ್ವರ

www.shikarat.com

5. ಅಭಿನವ ಪಂಪನೆಂದು ಖ್ಯಾತನಾದ ಕವಿ

(1) ನಾಗಚಂದ್ರ

(2) ರತ್ನಾಕರವರ್ಣಿ

(3) ಪಂಪ

(4) ನಯಸೇನ

www.Shikarat.com

***ಸೂಚನೆ :*** *ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಸಮಾನವಾದ ಅಂಶವಿರುವ ಮೂರು ಪದಗಳಿವೆ. ಭಿನ್ನವಾಗಿ ಉಳಿದಿರುವ ಪದವನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ 6 – 11)*

ಉದಾಹರಣೆ :

(1) ಚುನಾವಣೆ

(2) ಆಸ್ಪತ್ರೆ

(3) ಮುಖ್ಯಮಂತ್ರಿ

(4) ಭಾಷಣ

ಇವುಗಳಲ್ಲಿ (1), (3), (4) ರಾಜಕೀಯಕ್ಕೆ ಸಂಬಂಧಿಸಿದ ಪದಗಳು ಭಿನ್ನರೂಪ (2) ಆಸ್ಪತ್ರೆ ಆದ್ದರಿಂದ (2) ನ್ನು ಗುರುತಿಸಬೇಕು.

6. (1) ಬಾದಾಮಿ

(2) ಐಹೊಳೆ

(3) ಪಟ್ಟದಕಲ್ಲು

(4) ಮಯೂರ

7. (1) ಭೌತಶಾಸ್ತ್ರ

(2) ಅರ್ಥಶಾಸ್ತ್ರ

(3) ರಸಾಯನ ಶಾಸ್ತ್ರ

(4) ಜೀವಶಾಸ್ತ್ರ

8. (1) ವಿಕ್ರಮಾರ್ಜುನ ವಿಜಯ

(2) ಜೈಮಿನಿ ಭಾರತ

(3) ಗದಾಯುದ್ಧ

(4) ಅಜಿತಪುರಾಣ

9. (1) ಬಸವಣ್ಣ

(2) ಅಕ್ಕಮಹಾದೇವಿ

(3) ಸಂಚಿಹೊನ್ನಮ್ಮ

(4) ಅಲ್ಲಮ ಪ್ರಭು

www.shikarat.com

10. (1) ಕಾವೇರಿ

(2) ಕೃಷ್ಣಾ

(3) ಘಟಪ್ರಭಾ

(4) ನರ್ಮದಾ

11. (1) ಸೂರ್ಯ

(2) ಚಂದ್ರ

(3) ಭೂಮಿ

(4) ನಕ್ಷತ್ರ

www.Shikarat.com

**ಸೂಚನೆ :** ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಒಂದು ಪದ ಅಚ್ಚ ಕನ್ನಡ ಪದ. ಉಳಿದ ಮೂರು ಅನ್ಯ ಭಾಷಾ ಪದಗಳು ಕನ್ನಡ ಪದವನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ **12 – 15**)

**12.** (1) ಮಜ್ಜಿಗೆ
(2) ಖಾನಾವಳಿ
(3) ತರಾವರಿ
(4) ರೋಟಿ

**13.** (1) ದರೋಡೆ
(2) ಆಕಳು
(3) ಮೇಜು
(4) ಬಡಾವಣೆ

**14.** (1) ತಗಾದೆ
(2) ಮೆಲ್ಲಗೆ
(3) ಹೈರಾಣ
(4) ದುಬಾರಿ

**15.** (1) ತಾಕತ್ತು
(2) ಹಿತ್ತಿಲು
(3) ಗುಮಾಸ್ತ
(4) ತಾಯಿತ

**ಸೂಚನೆ :** ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆಮಾಡಿ ಗುರುತಿಸಿ. (ಪ್ರಶ್ನೆ ಸಂಖ್ಯೆ **16 – 20**)

**16.** ಕನಸಿನ ಗಂಟು
(1) ಕನಸಿನಲ್ಲಿ ತಾಳಿ ಕಟ್ಟು
(2) ಕನಸಿನಲ್ಲಿ ಧನವನ್ನು ಕಾಣುವುದು
(3) ಅಲಭ್ಯವಾದುದು
(4) ಕನಸಿನಲ್ಲಿ ಪ್ರೇಮ ನಿವೇದನೆ

www.shikarat.com

**17.** ಬಾಯಿ ತುರಿಕೆ
(1) ಬಾಯಿ ಕೆರೆಯುವುದು
(2) ಬೇಡದ ಮಾತಾಡುವುದು
(3) ಹೆಚ್ಚು ಮಾತಾಡುವುದು
(4) ಇನ್ನೊಬ್ಬರ ಮಾತಿನ ಮಧ್ಯೆ ಪ್ರವೇಶ

**18.** ತುಂಬಿದ ಕೊಡ
(1) ನೀರನ್ನು ತುಂಬಿಸಿಡುವ ಕೊಡ
(2) ಬುದ್ಧಿವಂತ
(3) ಜಂಭವಿಲ್ಲದವ
(4) ಶುದ್ಧವಾಗಿರುವ ನೀರು

www.Shikarat.com

19. ಅಜ್ಜಿ ಇಲ್ಲದ ಮನೆ, ಮಜ್ಜಿಗೆ ಇಲ್ಲದ ಊಟ

(1) ಮಜ್ಜಿಗೆ ಇಲ್ಲದ ಊಟ ಹೇಗೆ ಅಪರಿಪೂರ್ಣವೋ ಹಾಗೆ ಅಜ್ಜಿ ಇಲ್ಲದ ಮನೆಯು ಅಪರಿಪೂರ್ಣ

(2) ಅಜ್ಜಿ ಇದ್ದರೆ ಮನೆ, ಮಜ್ಜಿಗೆ ಇದ್ದರೆ ಊಟವಲ್ಲ

(3) ತಂದೆ ತಾಯಿಗಳಿಗಿಂತ ಅಜ್ಜಿ ಶ್ರೇಷ್ಠಳಲ್ಲ, ಮಜ್ಜಿಗೆಯೂ ಶ್ರೇಷ್ಠವಲ್ಲ

(4) ಅಜ್ಜಿ ಇಲ್ಲದ ಮನೆಯಲ್ಲಿ ಇರಬಹುದು ಹಾಗೆ ಮಜ್ಜಿಗೆಯೂ

20. ಅಳಿಲು ಸೇವೆ

(1) ಸ್ವಲ್ಪವೇ ದುಡಿಯುವುದು

(2) ಅಳಿಲಿಗೆ ತಿನಿಸು ನೀಡುವುದು

(3) ಚಿಕ್ಕ ಪುಟ್ಟ ಕೆಲಸ ಮಾಡುವುದು

(4) ನಿಷ್ಠೆಯಿಂದ ಮಾಡುವ ಅಲ್ಪ ಸೇವೆ

*ಸೂಚನೆ :* *ಕೆಳಗೆ ಕೊಟ್ಟಿರುವ ಪದಗಳಿಗೆ (ಪ್ರಶ್ನೆ ಸಂಖ್ಯೆ* ***21 – 25****) ವಿರುದ್ಧಾರ್ಥಕ ಪದಗಳನ್ನು ಗುರ್ತಿಸಿ.*

ಉದಾಹರಣೆ : **ಅಂತರ್ವಾಣಿ**

(1) ಹೊರವಾಣಿ

(2) ದುರ್ವಾಣಿ

(3) ಬಹಿರ್ವಾಣಿ

(4) ಒಳಗಿನವಾಣಿ

ಇಲ್ಲಿ (3) ಬಹಿರ್ವಾಣಿ ಸರಿಯಾದ ಉತ್ತರ ಆದ್ದರಿಂದ (3) ಎಂದು ಗುರುತಿಸಿ.

www.shikarat.com

21. ಅಮಿತ

(1) ತೂಕ

(2) ಹೆಚ್ಚು

(3) ಮಿತ

(4) ಕನಿಷ್ಟ

22. ಅಭಿಮಾನ

(1) ಅಭಿಮತ

(2) ತೆಗಳುವುದು

(3) ಹೀಯಾಳಿಸುವುದು

(4) ನಿರಭಿಮಾನ

www.Shikarat.com

23. ಅಸ್ತಮಾನ
(1) ಬೆಳಗು
(2) ಉದಯ
(3) ಉದ್ಭವ
(4) ಮಿನುಗು

24. ಕಠೋರ
(1) ಕಠು
(2) ಮೆತ್ತಗೆ
(3) ಮೃದು
(4) ಒರಟು

25. ಕನಿಷ್ಟ
(1) ಇಳಿಕೆ
(2) ಅಧೋಗತಿ
(3) ಗರಿಷ್ಟ
(4) ಪ್ರಗತಿ

*ಸೂಚನೆ : ಕೆಳಗಿನ ಪದಗಳಿಗೆ ಅವುಗಳ ಮುಂದೆ ಸೂಚಿಸಿದ ಪರ್ಯಾಯ ರೂಪಗಳಲ್ಲಿ ಸಮಾನಾರ್ಥಕವಾದ ಅಥವಾ ಅತಿ ಸಮೀಪದ ಅರ್ಥವುಳ್ಳ ರೂಪವನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ 26 – 30)*

26. ಕಾನನ
(1) ಕತ್ತಲು
(2) ಕಾಡು
(3) ತೋಟ
(4) ಕಾಡುವುದು

27. ಗೇಹ
(1) ಕೆಲಸ
(2) ಮಹಡಿ
(3) ಶರೀರ
(4) ಗೃಹ

28. ಮಂಡಲ
(1) ದಿಕ್ಕು
(2) ದಾರಿ
(3) ಗೆರೆ
(4) ವಲಯ

29. ನಿರಂತರ
(1) ಸತತ
(2) ನಿಧಾನ
(3) ಸುಲಲಿತ
(4) ಸಾಗುವುದು

30. ಶೀರ್ಷಿಕೆ
(1) ಹಣೆಬರಹ
(2) ಅಡಿ ಬರಹ
(3) ಟಿಪ್ಪಣಿ
(4) ತಲೆ ಬರಹ

www.shikarat.com

www.Shikarat.com

*ಸೂಚನೆ : ಕೆಳಗಿನ ಪದಗಳನ್ನು ಬಿಡಿಸಿ ಬರೆದಿದೆ. ಅವುಗಳಲ್ಲಿ ಸರಿಯಾದುದನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ **31** ಮತ್ತು **32**)*

**31.** ಬರಿದೊಡಲು

(1) ಬರಿ + ದೊಡಲು

(2) ಬರಿದೊಡೆ + ಒಲು

(3) ಬರಿದು + ಒಡಲು

(4) ಬರಿದಾದ + ದೊಡಲು

**32.** ಬಾಂದಳ

(1) ಬಾನು + ದಳ

(2) ಬಾಂ + ದಳ

(3) ಬಾನ್ + ತಳ

(4) ಬಾಂದ್ + ತಳ

*ಸೂಚನೆ : ಗೆರೆಯಿಂದ ಸೂಚಿಸಿದ ಭಾಗದಲ್ಲಿ ದೋಷವಿದ್ದರೆ ಮುಂದೆ ಕೊಡಲಾದ ನಾಲ್ಕು ರೂಪಗಳಲ್ಲಿ ಸರಿಯಾದುದನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ **33 – 37**)*

**33.** ರಾವಣನ ಮನಪರಿವರ್ತನೆಯ ಸಮಯ

(1) ಮನಾ ಪರೀವತ್ರನೆ

(2) ಮನ ಪರೀವ್ರರ್ತನೆ

(3) ಮನಃ ಪರಿವರ್ತನೆ

(4) ಸರಿಯಾಗಿದೆ

**34.** "ಸಕಾಲಕ್ಕೆ ಒದಗಿ ಬರುವ ವಸ್ತುವೇ ಶ್ರೇಷ್ಠ"

(1) ಶೇಷ್ಟ

(2) ಶ್ರ್ೇಷ್ಟ

(3) ಶ್ರಷ್ಠ

(4) ಸರಿಯಾಗಿದೆ

**35.** ಅನುಭವಗಳ ಅಭಿವ್ಯಕ್ತಿಯೇ ಭಾಷೆ

(1) ಅಬಿವ್ಯಕ್ತಿಯ

(2) ಅಬೀವ್ಯಕ್ತೀಯ

(3) ಅಭಿವ್ಯಕ್ತಿಯೆ

(4) ಸರಿಯಾಗಿದೆ

www.shikarat.com

**36.** ಮಾನವನ ಭಾಷೆ ಸಂಕೇತಗಳ ವಿವಸ್ಥೆ

(1) ವುವಸ್ಥೆ

(2) ವ್ಯವಸ್ಥೆ

(3) ವ್ಯವಸ್ತೆ

(4) ಸರಿಯಾಗಿದೆ

**37.** ಚಾಲುಕ್ಯ ಚಕ್ರೆಶ್ವರನಾದ ತ್ರಿಭುವನಮಲ್ಲ

(1) ಚಕ್ರೈಶ್ವರ

(2) ಚಕ್ರೇಶ್ವರ

(3) ಚರ್ಕೆಶ್ವರ

(4) ಸರಿಯಾಗಿದೆ

www.Shikarat.com

**ಸೂಚನೆ :** ಕೆಳಗೆ ಕೊಟ್ಟಿರುವ ಪದಗಳನ್ನು ಸುಧಾರಿಸಿ, ಸುಧಾರಣೆ ಇಲ್ಲದಿದ್ದರೆ ಸುಧಾರಣೆ ಇಲ್ಲ ಎಂದು ಗುರ್ತಿಸಿ. (ಪ್ರಶ್ನೆ ಸಂಖ್ಯೆ 38 – 41)

**38.** ಸಾರ್ಥಕ್ಯ

(1) ಸಾರ್ತಕ್ಯ

(2) ಸಾರ್ಥೆಕ್ಯ

(3) ಸಾರತಕ್ಯ

(4) ಸುಧಾರಣೆ ಇಲ್ಲ

**39.** ವಿಶಿಷ್ಟ

(1) ವಿಸಿಷ್ಠ

(2) ವಿಷಿಷ್ಟ

(3) ವಿಶಿಷಟ

(4) ಸುಧಾರಣೆ ಇಲ್ಲ

**40.** ಸುಕ್ಷ್ಮಾತೀಸೂಕ್ಷ್ಮ

(1) ಸೂಕ್ಷ್ಮಾತೀಸೂಕ್ಷ್ಮ

(2) ಸೂಕ್ಷಾತೀಸುಕ್ಮ

(3) ಸುಕ್ಮತೀಸುಕ್ಮ

(4) ಸುಧಾರಣೆ ಇಲ್ಲ

**41.** ಅಭ್ಯರ್ಥಿ

(1) ಅಭ್ಯರ್ತಿ

(2) ಅಬ್ಯರ್ಥಿ

(3) ಅಬಿಯರ್ತಿ

(4) ಸುಧಾರಣೆ ಇಲ್ಲ

**ಸೂಚನೆ :** ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ. (ಪ್ರಶ್ನೆ ಸಂಖ್ಯೆ 42 – 46)

**42.** 'ಶಿಶು ಜನಿಸಿತು' ಯಾವ ಲಿಂಗ ______

(1) ಸ್ತ್ರೀ ಲಿಂಗ

(2) ನಿತ್ಯ ನಪುಂಸಕ ಲಿಂಗ

(3) ಸ್ತ್ರೀ ನಪುಂಸಕ ಲಿಂಗ

(4) ಪುಲ್ಲಿಂಗ

**43.** 'ಗಮಗಮಿಸು' ಎಂಬುದು ______

(1) ಸಾಧಿತ ಧಾತು

(2) ಪ್ರೇರಣಾರ್ಥಕ ಧಾತು

(3) ಸಮರ್ಪಕ ಧಾತು

(4) ಅಕರ್ಮಕ ಧಾತು

www.shikarat.com

**44.** 'ಮಾಡಲಿ' ಎಂಬುದು ______

(1) ಭವಿಷ್ಯತ್ಕಾಲದ ಕ್ರಿಯಾಪದ

(2) ವಿಧ್ಯರ್ಥಕ ಕ್ರಿಯಾಪದ

(3) ನಿಷೇಧಾರ್ಥಕ ಕ್ರಿಯಾಪದ

(4) ಸಂಭವನಾರ್ಥಕ ಕ್ರಿಯಾಪದ

**45.** 'ಮರ, ಗಿಡ, ಬಳ್ಳಿ' ಎಂಬುದು ______

(1) ದ್ವಂದ್ವ ಸಮಾಸ

(2) ದ್ವಿಗು ಸಮಾಸ

(3) ಅಂಶಿ ಸಮಾಸ

(4) ಅರಿ ಸಮಾಸ

www.Shikarat.com

46. ಅಕ್ಕನಲ್ಲಿ ಎಂಬುದು ____________

(1) ಪ್ರಥಮ

(2) ದ್ವಿತೀಯ

(3) ಸಪ್ತಮಿ

(4) ಸಂಬೋಧನ

***ಸೂಚನೆ :*** *ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ **47 – 51**) (1) (2) (3) ಎಂಬ ಗೆರೆ ಎಳೆದ ಭಾಗಗಳಿವೆ. ಈ ಯಾವುದೇ ಭಾಗದಲ್ಲಿ ವ್ಯಾಕರಣ, ಕಾಗುಣಿತ ಅಥವಾ ಚಿಹ್ನೆಗೆ ಸಂಬಂಧಿಸಿದ ದೋಷವಿದ್ದರೆ ಆ ಭಾಗವನ್ನು ಗುರ್ತಿಸಿ. ದೋಷವಿಲ್ಲದಿದ್ದರೆ "ತಪ್ಪಿಲ್ಲ" ಎಂಬ ನಾಲ್ಕನೇ (4) ಭಾಗವನ್ನು ಗುರುತಿಸಿ.*

www.shikarat.com

ಉದಾಹರಣೆ :

ಈ ಜೀವಸೃಷ್ಟಿಗೆ ಪ್ರಕೃತಿ (1) ಕಾರಣವಾದಂತೆ (2) ಜೀವನಾಶಕ್ಕೂ ಪ್ರಕೃತಿ ಕಾರಣವಾಗುತ್ತದೆ (3) ತಪ್ಪಿಲ್ಲ (4)

ಇದರ (3) ಭಾಗದಲ್ಲಿ ಪುನರಾವರ್ತನೆ ಯಾಗಿರುವ ಪ್ರಕೃತಿ ಪದ ತಪ್ಪು ಆದ್ದರಿಂದ (3) ತಪ್ಪೆಂದು ಭಾವಿಸಿ ಗುರುತಿಸಬಹುದು.

47. ಕೈಗಾರಿಕರಣದಿಂದ (1) ಮಾನವೀಯ ಮೌಲ್ಯಗಳು (2) ಬೆಲೆ ಕಳೆದುಕೊಳ್ಳುತ್ತಿಲ್ಲ. (3) ತಪ್ಪಿಲ್ಲ (4)

48. ಪ್ರಾಣಿ ಪ್ರಪಂಚದಲ್ಲೆಲ್ಲಾ (1) ಕ್ರೂರಪ್ರಾಣಿ ಎಂದರೆ (2) ಮಾನವ. (3) ತಪ್ಪಿಲ್ಲ (4)

49. ಅಧ್ಯಾಪಕರು (1) ವಿದ್ಯಾರ್ಥಿಗಳಿಗೆ (2) ಮಾದರಿಯಾಗಿರಬೇಕು. (3) ತಪ್ಪಿಲ್ಲ (4)

50. ಸಮಾಜ (1) ವ್ಯಕ್ತಿಯನ್ನು (2) ರೂಪಿಸುತ್ತದೆ. (3) ತಪ್ಪಿಲ್ಲ (4)

www.Shikarat.com

51. ಪ್ರಪಂಚ ಇಂದಿನ ದಿನಗಳಲ್ಲಿ
(1)
ಭಯೋತ್ಪಾದಕರ ಉಪಟಳದಿಂದ
(2)
ತೊಂದರೆ ಅನುಭವಿಸುತ್ತಿದೆ. ತಪ್ಪಿಲ್ಲ
(3) (4)

*ಸೂಚನೆ : ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ. (ಪ್ರಶ್ನೆ ಸಂಖ್ಯೆ 52 – 60)*

52. ಸಂಚಿ ಹೊನ್ನಮ್ಮ ರಚಿಸಿದ 'ಹದಿಬದೆಯ ಧರ್ಮ' ಎಂತಹ ಕಾವ್ಯ ________
(1) ಷಟ್ಪದಿ ಕಾವ್ಯ
(2) ಶೃಂಗಾರ ಕಾವ್ಯ
(3) ಚಂಪೂ ಕಾವ್ಯ
(4) ಸಾಂಗತ್ಯ ಕಾವ್ಯ

53. ಇವು ಕನಕದಾಸರ ಕೃತಿಗಳು ________
(1) ಮೋಹನ ತರಂಗಿಣಿ, ಜೈಮಿನಿ ಭಾರತ
(2) ನಳ ಚರಿತ್ರೆ, ಭರತೇಶ ವೈಭವ
(3) ಮೋಹನ ತರಂಗಿಣಿ, ನಳ ಚರಿತ್ರೆ
(4) ರಾಮಧಾನ್ಯ ಚರಿತೆ, ಸೋಮೇಶ್ವರ ಶತಕ

54. 'ಚಿಕ್ಕವೀರ ರಾಜೇಂದ್ರ' ಕೃತಿಯ ಕರ್ತೃ ________
(1) ಕುವೆಂಪು
(2) ಚಂದ್ರಶೇಖರ ಕಂಬಾರ
(3) ಮಾಸ್ತಿ
(4) ವಿ.ಕೃ. ಗೋಕಾಕ್

55. 'ಭಾರತ ಸಿಂಧುರಶ್ಮಿ' ಕೃತಿಯ ಕರ್ತೃ ________
(1) ಯು.ಆರ್. ಅನಂತಮೂರ್ತಿ
(2) ವಿ.ಕೃ. ಗೋಕಾಕ್
(3) ಚಂದ್ರಶೇಖರ ಕಂಬಾರ
(4) ಗಿರೀಶ್ ಕಾರ್ನಾಡ್

56. 'ಅನ್ನವನು ಇಕ್ಕುವುದು ನನ್ನಿಯನು, ನುಡಿಯುವುದು ತನ್ನಂತೆ ಪರರ ಬಗೆದೊಡೆ ..... ', ಈ ಸಾಲಿನ ಕವಿ ________
(1) ಕನಕದಾಸರು
(2) ಪುರಂದರದಾಸರು
(3) ವಾದಿರಾಜರು
(4) ಸರ್ವಜ್ಞ

57. ಕಾಕನ ಕೋಟೆ ನಾಟಕದ ಕರ್ತೃ ಯಾರು ________
(1) ಗಿರೀಶ್ ಕಾರ್ನಾಡ್
(2) ಪಿ. ಲಂಕೇಶ್
(3) ಕುವೆಂಪು
(4) ಮಾಸ್ತಿ

www.shikarat.com

www.Shikarat.com

58. 'ಚಿಕ್ಕವೀರ ರಾಜೇಂದ್ರ' ಕೃತಿಗೆ ಬಂದ ಪ್ರಶಸ್ತಿ ______
(1) ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
(2) ಪಂಪ ಪ್ರಶಸ್ತಿ
(3) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
(4) ಜ್ಞಾನಪೀಠ ಪ್ರಶಸ್ತಿ

59. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ 'ಅಪ್ಪ–ಮಗ' ಜೋಡಿ ______
(1) ದ.ರಾ. ಬೇಂದ್ರೆ – ವಾಮನ ಬೇಂದ್ರೆ
(2) ವಿ.ಕೃ. ಗೋಕಾಕ್ – ಅನಿಲ್ ಗೋಕಾಕ್
(3) ಕುವೆಂಪು – ಪೂರ್ಣಚಂದ್ರ ತೇಜಸ್ವಿ
(4) ಯಾರೂ ಇಲ್ಲ

60. 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಬರೆದವರು ______
(1) ವಾಲ್ಮೀಕಿ
(2) ಬೇಂದ್ರೆ
(3) ಕುವೆಂಪು
(4) ನಾಗಚಂದ್ರ

*ಸೂಚನೆ :* ಮುಂದಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 61 – 65) ಪದಗಳು ಕ್ರಮಬದ್ಧವಾಗಿಲ್ಲ. ಅವು ಅರ್ಥಪೂರ್ಣವಾಗುವಂತೆ ಗೆರೆ ಎಳೆದು ಸೂಚಿಸಿದ ಭಾಗಗಳನ್ನು ಪುನಃ ಜೋಡಿಸಿ. ಅವುಗಳ ಅನುಕ್ರಮವನ್ನು ಗುರುತಿಸಿ.

ಉದಾಹರಣೆ :

ನೋಡಿ (P) ದುರುಗುಟ್ಟಿ (Q) ಸುಟ್ಟುರಿಯುವಂತೆ (R) ದೌಡಾಯಿಸಿದಳು (S)

(1) Q R P S
(2) R S P Q
(3) R Q P S
(4) R P Q S

ಇಲ್ಲಿ Q R P S ಎಂಬುದು ಸರಿಯಾದ ಕ್ರಮ ಆದುದರಿಂದ ಇಲ್ಲಿ (1) ಅನ್ನು ಗುರುತಿಸಬೇಕು.

61. ಶಾಲಾ ಹಂತದಲ್ಲಿ (P) ಕನ್ನಡವನ್ನು (Q) ಕಡ್ಡಾಯಗೊಳಿಸಬೇಕು (R) ಪ್ರಾಥಮಿಕ (S)
(1) S P Q R
(2) R S P Q
(3) Q R P S
(4) S Q P R

www.shikarat.com

www.Shikarat.com

62. ಸಂಪರ್ಕವೇ (P) ಬೌದ್ಧಿಕ (Q) ಸಾಂಸ್ಕೃತಿಕ (R) ತಪ್ಪಿಹೋಗಿದೆ (S)

(1) R Q P S

(2) Q R S P

(3) R S P Q

(4) S R Q P

63. ವಂಚಿಸಲ್ಪಟ್ಟೆ (P) ಮಾಡುವ (Q) ಹಕ್ಕಿದ್ದರೂ (R) ವೋಟು (S)

(1) Q R S P

(2) Q S R P

(3) S Q R P

(4) R S P Q

64. ಹಣದ (P) ತೊಂದರೆ (Q) ವಹಿವಾಟಿನ (R) ನಗದು (S)

(1) S P R Q

(2) Q S P R

(3) R S Q P

(4) P Q S R

65. ಹೆಗ್ಗಡೆಯಾಗಿರುವ (P) ತನಗರಿವಾಗದೆಯೇ (Q) ಚಿಕ್ಕಯ್ಯನೂ (R) ಸಹಕರಿಸುತ್ತಾನೆ. (S)

www.shikarat.com

(1) P Q R S

(2) P R Q S

(3) R S P Q

(4) S R P Q

www.Shikarat.com

**ಸೂಚನೆ :** ಈ ಕೆಳಗೆ ಕೊಡಲಾದ ಆರು ವಾಕ್ಯಗಳುಳ್ಳ ಭಾಗಗಳಲ್ಲಿ ಒಂದು ಮತ್ತು ಆರನೇ ವಾಕ್ಯಗಳು ಸರಿಯಾದ ರೀತಿಯಲ್ಲಿವೆ. ನಡುವಿನ ನಾಲ್ಕು ವಾಕ್ಯಗಳು *P, Q, R* ಮತ್ತು *S* ಜಾಗ ಬದಲಾಯಿಸಿವೆ ಅವುಗಳನ್ನು ಅರ್ಥ ಬರುವಂತೆ ಸರಿಯಾಗಿ ಹೊಂದಿಸಿ ಉತ್ತರ ಯಾವುದು ಎಂಬುದನ್ನು ಗುರುತಿಸಬೇಕು (ಪ್ರಶ್ನೆ ಸಂಖ್ಯೆ ***66 – 70***)

ಉದಾಹರಣೆ :

1. 1893 ರಲ್ಲಿ ಒಮ್ಮೆ ಸ್ವಾಮಿ ವಿವೇಕಾನಂದರು ಪ್ಯಾರಿಸ್‌ನಿಂದ ಗ್ರಾಮವೊಂದಕ್ಕೆ ಹೊರಟಿದ್ದರು.

P. ಕುದುರೆ ಗಾಡಿಯ ಚಾಲಕ, ಕೆಲಗಿಳಿದು ತಮ್ಮ ಮಕ್ಕಳನ್ನು ಮುದ್ದಾಡಿ ಮುಂದೆ ಸಾಗುತ್ತಾನೆ.

Q. ಹಿಂದೆ ಮುಳುಗಿಹೊಗಿದ್ದ ಬ್ಯಾಂಕನ್ನು ಕಟ್ಟಿ ಮತ್ತೆ ಮಾಲೀಕನಾಗುವ ಹಿರಿಯಾಸೆ ಚಾಲನಿಗಿತ್ತು.

R. ಈಗ ಸಂಸಾರ ಸಾಗಿಸಲು, ಸಾಲ ತೀರಿಸಲು ಚಾಲಕ ವೃತ್ತಿಯನ್ನು ಅವಲಂಬಿಸಿದ್ದ.

S. ಚಾಲಕನ ಪೂರ್ವ ಚರಿತ್ರೆ ಕೇಳಿದ ವಿವೇಕಾನಂದರು ಅತೀವ ಆನಂದಪಟ್ಟು,

6. ಈ ವ್ಯಕ್ತಿ ಒಬ್ಬ ವ್ಯವಹಾರಿಕ ವೇದಾಂತಿ ಎಂದು ಮೆಚ್ಚಿಕೊಂಡರು ಕೆಳಕ್ಕೆ ಉರುಳಿದರೂ ಸನ್ನಿವೇಶಕ್ಕೆ ಬಲಿಯಾಗಬಾರದು ಅಲ್ಲವೆ ?

(1) P Q R S (2) Q P S R
(3) R Q S P (4) S P R Q

ಈ ಉದಾಹರಣೆಯಲ್ಲಿ P Q R S ಎಂಬುದು ಸರಿಯಾದ ವಾಕ್ಯ ಹೊಂದಾಣಿಕೆ ಕ್ರಮವಾಗಿದೆ. ಅದ್ದರಿಂದ ಇಲ್ಲಿ (1) ಅನ್ನು ಗುರುತಿಸಬೇಕು.

**66.** 1. ಕೃಷ್ಣ ಸಂಧಾನಕ್ಕೆ ತೆರಳಿದ ಸಂದರ್ಭದ ಒಂದು ಪ್ರಸಂಗ.

P. ಕಾಡಬೇಡ ಕೃಷ್ಣ ಬಂದರೆ ರೂಢಿ ಮೆಚ್ಚಲ್ಲ ನನ್ನ ನಿಷ್ಠೆ ದುರ್ಯೋಧನನಿಗೇ ಹೊರತು ಅಧಿಕಾರಕ್ಕಲ್ಲ.

Q. ಕರ್ಣನಿಗೆ ಜನ್ಮ ರಹಸ್ಯವನ್ನು ಕೃಷ್ಣ ಹೇಳುತ್ತಾನೆ. ನೀನು ಕುಂತಿಯ ಮಗ ಈ ರಾಜ್ಯಕ್ಕೆ ನಿಜವಾದ ಉತ್ತರಾಧಿಕಾರಿ.

R. ಪಾಂಡವರ ಕಡೆ ಬಾ ನಿನ್ನನ್ನು ರಾಜನನ್ನಾಗಿ ಮಾಡುತ್ತೇನೆ.

S. ರಾಜ್ಯಕ್ಕೆ ಒಡೆಯನಾಗಬೇಕಾದವನು ದುರ್ಯೋಧನನ ಎಂಜಲಿಗೆ ಕೈ ಒಡ್ಡಬೇಡ.

6. ಇಲ್ಲಿ ಕರ್ಣ ಉನ್ನತೋನ್ನತ ಆದರ್ಶ, ಸ್ವಾಮಿ ನಿಷ್ಠೆಯನ್ನು ತೋರುತ್ತಾನೆ.

(1) P Q R S

(2) Q R P S

(3) Q R S P

(4) R S Q P

www.shikarat.com

www.Shikarat.com

67. 1. ಅಲೆಗ್ಸಾಂಡರ್ ಪೌರಸ್‌ನನ್ನು ಗೆದ್ದೆನೆಂಬ ಸನ್ನಿವೇಶದಲ್ಲಿ ಆಡಿದ ಮಾತುಗಳು

P. ಜಗತ್ತನ್ನೇ ಗೆದ್ದೆನೆಂದು ಪೃಥ್ವಿಯೊಂದು ಅಂಗೈಯಲ್ಲಿದೆಯೆಂದು ಭಾವಿಸಿದೆ.

Q. ನಿಜವಾಗಿಯೂ ಅಲೆಗ್ಸಾಂಡರಿನ ಆತ್ಮ ವಿಹಂಗ ವಿಲಿ ವಿಲಿ ಒದ್ದಾಡುತ್ತಿತ್ತು.

R. ವಿಜಯ ನನ್ನದೇ ಜಗತ್ತಿನ ಕಣ್ಣಿಗೆ ಪೌರಸ್ ನನ್ನ ಸೆರೆಯಾಳು.

S. ಅಂತರಂಗದಲ್ಲಿ ನನ್ನಾತ್ಮ ಪಕ್ಷಿ ಪೌರಸನ ಪೌರುಷದ ಪಂಜರದಲ್ಲಿ ಸಿಲುಕಿದ ಒಂದು ಗುಬ್ಬಿ.

6. ಇಲ್ಲಿ ಅಲೆಗ್ಸಾಂಡರನ ಮನಸ್ಸಿನ ಹೋರಾಟದ ಚಿತ್ರಣವಿದೆ.

(1) P Q R S

(2) R S P Q

(3) Q S R P

(4) P R S Q

68. 1. ಪೋಸ್ಟ್ ಮಾಸ್ಟರ್ ಬೋಬಣ್ಣನ ಬದುಕಿನ ಚಿತ್ರಣವಿದೆ.

P. ಬೋಬಣ್ಣ ಸಾಯಂಕಾಲ ಒಂದು ಗಂಟೆ, ಬೆಳಿಗ್ಗೆ ಒಂದು ಗಂಟೆ, ಹಂಗಾಮಿಯಾಗಿ ಪೋಸ್ಟ್ ಮಾಸ್ಟರ ಕೆಲಸ ಮಾಡಲೊಪ್ಪಿದನು.

Q. ಹೊಸದಾಗಿ ಆರಂಭವಾಗಿದ್ದ ಅಬಚೂರಿನ ಪೋಸ್ಟ್ ಆಫೀಸಿನಲ್ಲಿ ಹಂಗಾಮಿಯಾಗಿ ಪೋಸ್ಟ್ ಮಾಸ್ಟರನಾಗಿದ್ದ ಬೋಬಣ್ಣ

R. ಮೊದಲು ಅವನು ಕೆಲಸ ಮಾಡುತ್ತಿದ್ದುದು ಅಬಚೂರಿನ ಸಾಹುಕಾರರಾದ ಆಲೀಜಾನ್ ಸಾಬರ ತೋಟದಲ್ಲಿ ರೈಟರ್ ಕೆಲಸ ಮಾಡುತ್ತಿದ್ದನು.

S. ಇಂದು ಅತ್ಯಂತ ಅಸಂತುಷ್ಟನೂ, ತೊಂದರೆಗೊಳಗಾದವನೂ ಆಗಿದ್ದನು.

6. ಬೋಬಣ್ಣನ ಜೀವನದ ಹೋರಾಟದ ದೃಶ್ಯವಿದೆ.

(1) P Q R S

(2) S R P Q

(3) Q S R P

(4) R S P Q

www.shikarat.com

www.Shikarat.com

69. 1. ಭಾರತ ದೇಶದಲ್ಲಿ ವಾಸಿಸುತ್ತಿದ್ದ ಒಬ್ಬ ಫಕೀರ ಮತ್ತು ಮಹಾನ್ ಸಾಧಕ ಸೂಫಿಯ ಪ್ರಸಂಗ.

P. ಈ ಆಧಾರದ ಮೇಲೆಯೇ ನನ್ನ ಗುರುಗಳು ನನ್ನ ಅರ್ಹತೆಯನ್ನು ನಿರ್ಣಯಿಸಿದ್ದು.

Q. ಸಂಕಷ್ಟದಲ್ಲಿರುವವರನ್ನು ನೋಡಿದಾಗ ಅಂತಃಪ್ರೇರಣೆಯ ಪ್ರಕ್ರಿಯೆಯೂ, ಕೇವಲ ಭಾವನಾತ್ಮಕವಾದ್ದೊ ಅಥವಾ ಕ್ರಿಯಾತ್ಮಕವಾದ್ದೊ ಎಂಬುದರ ಮೇಲೆ ಅರ್ಹತೆ ನಿರ್ಧಾರವಾಗುತ್ತದೆ.

R. ಅನುಭವಕ್ಕೆ ಬಂದ ಘಟನೆಗಳಿಗೆ ನಾವು ಹೇಗೆ ಸ್ಪಂದಿಸುತ್ತೇವೆ ಎಂಬ ನಿರ್ಣಾಯಕ ಸನ್ನಿವೇಶಗಳ ಮೂಲಕ ನಮ್ಮ ನಿಜವಾದ ನಡವಳಿಕೆ, ವಿಚಾರಗಳು ವ್ಯಕ್ತವಾಗುತ್ತವೆ.

S. ಅಲ್ಲಾನ ಆ ಹೆಸರನ್ನು ಹೇಳುತ್ತೇನೆ ಕೇಳು.

6. ಅಲ್ಲಾನ ಹೆಸರಿನ ಹುಡುಕಾಟದ ಮಹತ್ವವಿದೆ.

(1) Q R P S
(2) P S R Q
(3) S P R Q
(4) R P S Q

70. 1. ಶಿಕ್ಷಣವನ್ನು ಕುರಿತು ರವೀಂದ್ರರ ವಿಚಾರಧಾರೆ.

P. ಬಯಲಿನಲ್ಲಿ ಓಡಾಡುವುದು ಮಕ್ಕಳಿಗೆ ಇಷ್ಟ. ಅವರು ಓದುತ್ತಿದ್ದ ಶಾಲೆಗಳಲ್ಲಿ ಬೇಡವಾದ ವಿಷಯಗಳನ್ನು ಕಡ್ಡಾಯವಾಗಿ ಕಲಿಸುವುದು, ಯಾಂತ್ರಿಕವಾಗಿ ಶಿಕ್ಷಣ ಪದ್ಧತಿಯನ್ನೇ ಪ್ರತಿಭಟಿಸುವಂತೆ ಮಾಡಿತು.

Q. ಚಿಕ್ಕ ಮಕ್ಕಳ ಮನಸ್ಸು ಯಾವಾಗಲೂ ಸ್ವಾತಂತ್ರ್ಯ ಬಯಸುತ್ತದೆಂಬುದನ್ನು ರವೀಂದ್ರರು ಕಂಡುಕೊಂಡಿದ್ದರು.

R. ಶಿಕ್ಷಣದ ವಿಷಯದಲ್ಲಿ ರವೀಂದ್ರರ ವಿಚಾರದಂತೆ ಪಟ್ಟಣಗಳಲ್ಲಿ ಮಕ್ಕಳನ್ನು ನೋಡಿಕೊಳ್ಳಲು ಸೇವಕರಿರುತ್ತಾರೆ. ಅವರ ಮೇಲ್ವಿಚಾರಣೆ ಒಂದು ರೀತಿಯ ಬಂಧನವಿದ್ದಂತೆಯೇ.

www.shikarat.com

S. ಶಿಕ್ಷಣದ ವಿಷಯದಲ್ಲಿ ರವೀಂದ್ರರ ವಿಚಾರಗಳು ಅನುಭವದಿಂದಲೇ ಬಂದಿರುವಂಥವು.

6. ಇಲ್ಲಿ ರವೀಂದ್ರರ ಶಿಕ್ಷಣದ ಅನುಭವಧಾರೆಯಿದೆ.

(1) S R Q P
(2) P Q R S
(3) Q R S P
(4) R S P Q

www.Shikarat.com

***ಸೂಚನೆ : ಕೆಳಗೆ ಕೊಡಲಾದ ಗಾದೆಗಳ ಅರ್ಥವನ್ನು ಗ್ರಹಿಸಿ ಸೂಕ್ತ ಉತ್ತರ ಗುರ್ತಿಸಿ. (ಪ್ರಶ್ನೆ ಸಂಖ್ಯೆ 71 – 75)***

**71.** ಮಾತೇ ಮುತ್ತು, ಮಾತೇ ಮೃತ್ಯು

(1) ಹೆಚ್ಚು ಮಾತನಾಡಿದರೆ ಸಾವು ಖಂಡಿತ.

(2) ಬೆಲೆಬಾಳುವಂತಹ ಮುತ್ತಿಗೆ ಸಮ ಮಾತು. ಅದಿಲ್ಲದಿದ್ದರೆ ಮೃತ್ಯುವಿಗೆ ಸಮ.

(3) ಮಾತನಾಡಿದರೆ ಮುತ್ತು ಸಿಗುತ್ತದೆ.

(4) ಮಾತಿನಿಂದ ಮುತ್ತನ್ನು ಕೊಳ್ಳಲಾಗುವುದಿಲ್ಲ.

**72.** ಅಪ್ಪ ಹಾಕಿದ ಆಲದ ಮರ

(1) ಕಟ್ಟುಪಾಡುಗಳನ್ನು ಮೀರಿ ನಡೆಯಬೇಕು.

(2) ಹಿರಿಯರು ಹಾಕಿದ ಮಾರ್ಗದಲ್ಲಿ ನಡೆಯುವುದು.

(3) ಸರಿ ತಪ್ಪು ತಿಳುವಳಿಕೆಯಿಲ್ಲದೆ ನಡೆಯುವುದು.

(4) ಹಿರಿಯರ ಮಾತಿಗೆ ಬೆಲೆ ಕೊಡಬೇಕು.

**73.** ಹಾಸಿಗೆ ಇದ್ದಷ್ಟು ಕಾಲು ಚಾಚು.

(1) ಇರುವುದರಲ್ಲಿ ತೃಪ್ತಿ ಪಡಬೇಕು.

(2) ಇಲ್ಲದ್ದಕ್ಕೆ ಅತಿ ಆಸೆ ಪಡಬಾರದು.

(3) ಅತಿ ಆಸೆ ಪಟ್ಟಷ್ಟು ನೋವಾಗುವುದು.

(4) ಹೆಚ್ಚಾಗಿ ಬಯಸಿದರೆ ಇದ್ದದ್ದು ಕಳೆದು ಹೋಗುವುದು.

**74.** ಜನ ಮರುಳೋ, ಜಾತ್ರೆ ಮರುಳೋ

(1) ಗುಂಪು ಸೇರಿದ ಕಡೆ ಜಾತ್ರೆಯಾಗುವುದು.

(2) ಜನರ ಗುಂಪಿಗೆ ಮರುಳಾಗುವುದು.

(3) ತಿಳುವಳಿಕೆ ಇಲ್ಲದೆ ನಡೆದುಕೊಳ್ಳುವುದು.

(4) ಜನರ ಗುಂಪನ್ನು ನೋಡಿ ಮರುಳಾಗಬಾರದು.

**75.** ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ

(1) ಉಪ್ಪಿಲ್ಲದ ಅಡಿಗೆ ಹೇಗೆ ರುಚಿಸುವುದಿಲ್ಲವೋ ಹಾಗೆ ತಾಯಿಗಿಂತ ದೊಡ್ಡ ಬಂಧುವಿಲ್ಲ.

(2) ಉಪ್ಪಿಲ್ಲದ ಅಡಿಗೆ, ತಾಯಿಯಿಲ್ಲದ ಬದುಕು ಸುಂದರ.

(3) ಪ್ರಪಂಚದಲ್ಲಿ ಉಪ್ಪು, ತಾಯಿ ಇವೆರಡು ಇಲ್ಲದಿದ್ದರೂ ಇರಬಹುದು.

(4) ಉಪ್ಪಿಲ್ಲದ ಅಡಿಗೆ ತಿನ್ನಲು ರುಚಿ.

www.shikarat.com

www.Shikarat.com

*ಸೂಚನೆ : ಕೆಳಗೆ ಕೊಡಲಾಗಿರುವ ಶಬ್ದಗಳನ್ನು ಓದಿ ಸರಿಯಾದ ಅರ್ಥಗ್ರಹಿಸಿ, ಸೂಕ್ತ ಉತ್ತರ ಗುರ್ತಿಸಿ. (ಪ್ರಶ್ನೆ ಸಂಖ್ಯೆ 76 – 80)*

**76.** 'ನಿತ್ರಾಣ' ಎಂದರೆ

(1) ಶಕ್ತಿ

(2) ಧೈರ್ಯ

(3) ನಿಶ್ಯಕ್ತಿ

(4) ಕುಂದು

**77.** 'ಉದಕ' ಎಂದರೆ

(1) ಹಾವು

(2) ಅನ್ನ

(3) ನೀರು

(4) ಕೆಂಡ

**78.** 'ಕರ್ಮ' ಎಂದರೆ

(1) ಪಾಪ

(2) ಗುರು

(3) ದೇವರು

(4) ಕಾರ್ಯ

**79.** 'ಕವಲು' ಎಂದರೆ

(1) ಬೇರೆ

(2) ವಿಧ

(3) ಟಿಸಿಲು

(4) ಕಳವಳ

**80.** 'ಹಂದೆ' ಎಂದರೆ

(1) ಬುದ್ಧಿವಂತ

(2) ಜಾಣ

(3) ಪುಕ್ಕಲ

(4) ಸೋಮಾರಿ

*ಸೂಚನೆ : ಕೆಳಗಿನ ಪ್ರಶ್ನೆಗಳನ್ನು ಓದಿ ಉತ್ತರವನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ 81 – 90)*

**81.** ಕರ್ನಾಟಕದ ವಿಶ್ವ ಪರಂಪರಾ ತಾಣಗಳಲ್ಲಿ ಇದೂ ಒಂದು.

(1) ಚಿತ್ರದುರ್ಗ

(2) ಕಾರ್ಕಳ

(3) ಶ್ರವಣ ಬೆಳಗೊಳ

(4) ಪಟ್ಟದ ಕಲ್ಲು

www.shikarat.com

**82.** ಮಾಸ್ತಿ ವೆಂಕಟೇಶ ಅಯ್ಯಂಗಾರರ ಕಾವ್ಯನಾಮ

(1) ರಾಮಯ್ಯಂಗಾರ್

(2) ಮಾಸ್ತಿ

(3) ಶ್ರೀನಿವಾಸ

(4) ಅ.ನ.ಕೃ

www.Shikarat.com

83. ಚೌಡಯ್ಯ ಸ್ಮಾರಕ ಭವನದ ಕಟ್ಟಡವು

(1) ಪಿಟೀಲಿನ ಆಕಾರದಲ್ಲಿದೆ

(2) ವೀಣೆಯ ಆಕಾರದಲ್ಲಿದೆ

(3) ಮೃದಂಗದ ಆಕಾರದಲ್ಲಿದೆ

(4) ಕುಂಭದ ಆಕಾರದಲ್ಲಿದೆ

84. 'ಅಶ್ವತ್ಥಾಮನ್' ನಾಟಕದ ಕರ್ತೃ

(1) ತೀ.ನಂ. ಶ್ರೀಕಂಠಯ್ಯ

(2) ಬಿ.ಎಂ. ಶ್ರೀಕಂಠಯ್ಯ

(3) ಆನಂದ

(4) ಕೆ.ವಿ. ಪುಟ್ಟಪ್ಪ

www.shikarat.com

85. ಇವುಗಳಲ್ಲಿ ಕಾರಂತರ ಕೃತಿ ಯಾವುದು?

(1) ಮಲೆಗಳಲ್ಲಿ ಮದುಮಗಳು

(2) ಚಿರಸ್ಮರಣೆ

(3) ಮರಳಿ ಮಣ್ಣಿಗೆ

(4) ಜ್ವಾಲಾಮುಖಿ

86. ಶಿಶು ಸಾಹಿತ್ಯವನ್ನು ರಚಿಸಿದವರು

(1) ಅ.ನ.ಕೃ

(2) ಪಂಜೆ ಮಂಗೇಶರಾಯರು

(3) ಗೋವಿಂದ ಪೈ

(4) ಪು.ತಿ.ನ.

87. ಕನ್ನಡದಲ್ಲಿಯ ಸಂಧಿಗಳೆಷ್ಟು ?

(1) 4

(2) 3

(3) 5

(4) 2

88. ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಪ್ರಥಮ ಬಾರಿಗೆ "ಭಾರತ ರತ್ನ" ಪ್ರಶಸ್ತಿ ಪಡೆದವರು

(1) ಪಂಡಿತ ಪಂಚಾಕ್ಷರಿ ಗವಾಯಿಗಳು

(2) ಸವಾಯಿ ಗಂಧರ್ವರು

(3) ಪಂಡಿತ್ ಭೀಮಸೇನ್ ಜೋಷಿ

(4) ಪಂಡಿತ್ ಎಂ. ವೆಂಕಟೇಶ್ ಕುಮಾರ್

89. 'ಅಕ್ಕ ಅಕ್ಕ ಗಿಡ ನೋಡು ಗಿಡದ ತುಂಬಾ ಜಡೆ ನೋಡು ಜಡೆ ಬಿಚ್ಚಿ ವಾಸನೆ ನೋಡು ' ಈ ಒಗಟಿನ ಉತ್ತರ

(1) ಈರುಳ್ಳಿ

(2) ಏಲಕ್ಕಿ

(3) ತೆಂಗಿನಕಾಯಿ

(4) ಮುಸುಕಿನ ಜೋಳ

90. 'ಬಲ್ಲಿದರು ಇದ್ದು ಬಲವಿಲ್ಲ' ಇದನ್ನು ತಿಳಿಸಿದವರು

(1) ಕುವೆಂಪು

(2) ಶಿಶುನಾಳ ಷರೀಫ

(3) ಬಿ.ಎಂ. ಶ್ರೀಕಂಠಯ್ಯ

(4) ಸರ್ವಜ್ಞ

www.Shikarat.com

*ಸೂಚನೆ : ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ ಅರ್ಥ ಗ್ರಹಿಸಿ ಕೇಳಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ **91 – 95**)*

ಬಹುರೂಪಿಣಿ ವಿದ್ಯಾ ದೇವತೆಯನ್ನು ಒಲಿಸಿಕೊಳ್ಳಲು ರಾವಣನು ತಪಸ್ಸಿಗೆ ಕೂತಾಗ ವಿದ್ಯಾ ಸಾಧನೆ ಸಾಧನವಾಗದ ಮುನ್ನ ರಾವಣನಿಗೆ ಉಪಸರ್ಗವನ್ನುಂಟು ಮಾಡಿ, ಲಂಕಾಪುರವನ್ನು ವಶಪಡಿಸಿಕೊಳ್ಳಲು ವಿಭೀಷಣ ರಾಮನಿಗೆ ಹೇಳುವನು. ವಿಭೀಷಣನ ಆಮಂತ್ರಣವನ್ನು ಶ್ರೀ ರಾಮನು ನಯವಾಗಿ ತಿರಸ್ಕರಿಸುತ್ತಾನೆ. ಅಂಗದಾದಿಗಳು ಶ್ರೀರಾಮನು ಅರಿಯದಂತೆ ರಾವಣನ ವಿದ್ಯಾಸಾಧನೆಗೆ ವಿಘ್ನವುಂಟು ಮಾಡಲು ಲಂಕೆಗೆ ಬಂದು ಉಪ್ಪರಿಗೆಗಳನ್ನು ಕೆಡವುತ್ತಾ, ನಂದನವನಗಳನ್ನು ಕೆಡಿಸುತ್ತಾ ಖೇಚರ ಸ್ತ್ರೀಯನ್ನು ಬಿಡದೆ ಎಳೆದು ತಂದು, ಹೊಡೆದು ಆಕ್ರಂದನವನ್ನುಂಟು ಮಾಡಿದರೂ, ರಾವಣನು ಮಂತ್ರವನ್ನು ಜಪಿಸುತ್ತಲೇ ಇದ್ದನು.

ಆ ಕ್ಷಣದಲ್ಲಿ ವಿದ್ಯಾದೇವತೆ ರಾವಣನ ಎದುರಿನಲ್ಲಿ ಪ್ರತ್ಯಕ್ಷವಾಗಿ "ಚಕ್ರಧಾರಿಯಾದ ಲಕ್ಷ್ಮಣನನ್ನೂ, ಚರಮದೇಹಿಯಾದ ಶ್ರೀರಾಮಸ್ವಾಮಿಯನ್ನು ಬಿಟ್ಟು ಉಳಿದವರನ್ನು ಜೀವಸಹಿತ ಬಿಡುವುದಿಲ್ಲ" ಎಂದಿತು. ಆಗ ರಾವಣನು 'ಉಳಿದವರ ನಾಶದಿಂದ ನನಗೇನು ಲಾಭ' ಎಂದು ಬಹುರೂಪಿಣಿ ವಿದ್ಯಾದೇವತೆಗೆ ನಮಸ್ಕರಿಸಿ, ಶಾಂತಿ ಜಿನ ಭವನವನ್ನು ಮೂರು ಸಲ ಪ್ರದಕ್ಷಿಣೆ ಮಾಡಿ ಹೊರಬರುವಷ್ಟರಲ್ಲಿ ಅಂಗದಾದಿಗಳು ಅಲ್ಲಿಂದ ಹೊರಟು ತಮ್ಮ ಬೀಡನ್ನು ಸೇರಿದ್ದರು.

**91.** ರಾವಣನ ಎದುರಿಗೆ ಪ್ರತ್ಯಕ್ಷವಾದ ದೇವತೆ ಯಾರು?

(1) ಧರ್ಮ ದೇವತೆ

(2) ಕಾಡಿನ ದೇವತೆ

(3) ಖೇಚರ ದೇವತೆ

(4) ವಿದ್ಯಾದೇವತೆ

**92.** ಚರಮ ದೇಹಿ ಯಾರು?

(1) ಶ್ರೀರಾಮಚಂದ್ರ

(2) ವಿಭೀಷಣ

(3) ರಾವಣ

(4) ಲಕ್ಷ್ಮಣ

**93.** ರಾವಣನು ಯಾವ ದೇವತೆಯನ್ನು ಒಲಿಸಿಕೊಳ್ಳಲು ತಪಸ್ಸಿಗೆ ಕೂತನು?

(1) ಸಂತಾನ ದೇವತೆ

(2) ಬಹುರೂಪಿಣಿ ವಿದ್ಯಾದೇವತೆ

(3) ಧರ್ಮದೇವತೆ

(4) ದಾನದೇವತೆ

www.shikarat.com

www.Shikarat.com

**94.** ವಿಭೀಷಣ ರಾಮನಿಗೆ ಹೇಳಿದ್ದೇನು?

(1) ರಾವಣನನ್ನು ಯುದ್ಧದಲ್ಲಿ ಸೋಲಿಸು.

(2) ರಾವಣನ ವ್ರತ ಭಂಗ ಮಾಡು

(3) ಲಂಕಾಪುರವನ್ನು ವಶಪಡಿಸಿಕೋ

(4) ರಾವಣನ ಸಾಧನೆಗೆ ತಡೆ ಹಾಕು.

**95.** ಅಂಗದಾದಿಗಳು ಮಾಡಿದ ಅವಘಡ ಎಂತಹದ್ದು?

(1) ಅರಮನೆಯ ಮೆಟ್ಟಿಲನ್ನು ಕಟ್ಟಿದರು.

(2) ಉಪ್ಪರಿಗೆ, ನಂದನವನ, ಖೇಚರ ಸ್ತ್ರೀಯರಿಗೆ ತೊಂದರೆ ಮಾಡಿದರು.

(3) ಖೇಚರ ಸ್ತ್ರೀಯರೊಂದಿಗೆ ವಿಹರಿಸಿದರು.

(4) ನಂದನವನದಲ್ಲಿ ವಿಶ್ರಮಿಸಿದರು.

www.shikarat.com

***ಸೂಚನೆ :*** *ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ. (ಪ್ರಶ್ನೆ ಸಂಖ್ಯೆ **96 – 100**)*

ಕನಕದಾಸರು ದಾಸಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿದ್ದಾರೆ. ಪುರಂದರದಾಸರಿಗೆ ಹೆಗಲೆಣೆಯಾಗಿ ನಿಲ್ಲಬಲ್ಲ ವ್ಯಕ್ತಿತ್ವ. ಇವರ ಪೂರ್ವನಾಮ ________ . ಇವರ ಆರಾಧ್ಯದೈವ ಹಾಗೂ ಅಂಕಿತ ನಾಮ ____________ . ಇವರು ಗುರುಗಳಾದ ______ ವಿಶೇಷ ಮನ್ನಣೆಗೆ ಪಾತ್ರರಾಗಿದ್ದರು. ಕೀರ್ತನೆಗಳಲ್ಲದೆ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇವರು ರಚಿಸಿದ ನಳ ಮತ್ತು ____________ ಕಥೆ ಬಹಳ ಸೊಗಸಾಗಿದ್ದು, ಇದರ ಮೂಲ ಮೊದಲಿಗೆ ____________ ದಲ್ಲಿ ಕಂಡು ಬರುತ್ತದೆ.

**96.** (1) ಹಂಸ

(2) ಪಾರಿವಾಳ

(3) ನವಿಲು

(4) ದಮಯಂತಿ

**97.** (1) ರಾಮಾಯಣ (ವಾಲ್ಮೀಕಿ)

(2) ಗದಾಯುದ್ಧ (ರನ್ನ)

(3) ಮಹಾಭಾರತ (ವ್ಯಾಸ)

(4) ಪದ್ಮಪುರಾಣ

**98.** (1) ರಾಮಪ್ಪ

(2) ಭೀಮಪ್ಪ

(3) ತಿಪ್ಪರಸ

(4) ತಿಮ್ಮಪ್ಪ

**99.** (1) ಪುರಂದರ ವಿಠಲ

(2) ವಿಜಯ ವಿಠಲ

(3) ಕಾಗಿನೆಲೆ ಆದಿಕೇಶವ

(4) ಹರಿದಾಸ

**100.** (1) ರಾಮರಾಯರು

(2) ಕೇಶವದಾಸರು

(3) ವ್ಯಾಸರಾಯರು

(4) ನಾರಾಯಣದಾಸರು